ಸಿ.ಸಿ. ನಂ. 2565/2022 ಪಿ.ಡಬ್ಲ್ಯೂ-1

**ಸಾಕ್ಷಿಗೆ ದಿನಾಂಕ 3.3.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ಶ್ರೀ ಬಿ.ಎಸ್.ಎಸ್ ವಕೀಲರಿಂದಃ**

1 ಮತ್ತು 2 ನೇ ಆರೋಪಿತರಿಗೆ ಮೂರು ಜನ ಮಕ್ಕಳಿರುತ್ತಾರೆ. 1 ನೇ ಆರೋಪಿಗೆ ಇಬ್ಬರು ಹೆಂಡತಿಯರು ಇರುತ್ತಾರೆ ಎಂಬ ವಿಚಾರ ನನಗೆ ಗೊತ್ತಿರುವುದಿಲ್ಲ. 1 ನೇ ಆರೋಪಿಗೆ ಮೊದಲನೇ ಹೆಂಡತಿ ಮೂಲಕ 3 ಜನ ಮಕ್ಕಳು ಹಾಗೂ 2 ನೇ ಹೆಂಡತಿಯ ಮೂಲಕ 3 ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ಅವರ ಇಬ್ಬರು ಹೆಂಡತಿಯರು ಈಗ ತೀರಿಕೊಂಡಿರುತ್ತಾರೆ. 2 ನೇ ಆರೋಪಿಯು ನನ್ನ ತಂದೆಯ ಸಹೋದರಿಯಾಗಿರುತ್ತಾರೆ. 2 ನೇ ಆರೋಪಿಯು ತನ್ನ ಸಹೋದರನ ಮಗಳನ್ನು ತನ್ನ ಮಗನಿಗೆ ಮದುವೆ ಮಾಡಿಸಿರುತ್ತಾರೆ ಎಂದರೆ ಸರಿ. ನನ್ನ ಗಂಡ ಹಸು ಮೈ ತೊಳೆಯಲು ಕೆರೆಗೆ ಹೋದಾಗ ಬಿದ್ದು ತೀರಿಕೊಂಡಿರುತ್ತಾರೆ. ನನ್ನ ಗಂಡ ತೀರಿಕೊಂಡ ನಂತರ ನಾನು ನನ್ನ ತವರು ಮನೆಗೆ ಹೋಗಿರುತ್ತೇನೆ ಎಂದರೆ ಸಾಕ್ಷಿದಾರರು ಆರೋಪಿತರು ನನ್ನ ಜೊತೆ ಗಲಾಟೆ ಮಾಡಿ ನನ್ನನ್ನು ಹೊರಗೆ ಕಳುಹಿಸಿರುತ್ತಾರೆ ಎನ್ನುವರು. ನಂತರ ನಾನು ಮತ್ತು ನನ್ನ ತಂದೆ ಆರೋಪಿತರ ಬಳಿ ಜಮೀನು ಕೊಡಿ ಎಂದು ಆಗಾಗ ಗಲಾಟೆ ಮಾಡಿರುತ್ತೇವೆ ಎಂದರೆ ಸಾಕ್ಷಿದಾರರು ಗ್ರಾಮದವರು ಜಮೀನು ಕೊಡಲು ಹೇಳಿರುತ್ತಾರೆ ಎನ್ನುವರು. 2 ನೇ ಆರೋಪಿಯು ನನ್ನ ಗಂಡನಿಗೆ ಬೈಕನ್ನು ತೆಗೆಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಬೈಕನ್ನು ನಾನು ಆರೋಪಿತರ ಬಳಿ ಹೇಳದೇ ನನ್ನ ತವರು ಮನೆಗೆ ತೆಗೆದುಕೊಂಡು ಬಂದಿದ್ದರಿಂದ ಆರೋಪಿತರು ನನ್ನ ಬಳಿ ಅದನ್ನು ಪ್ರಶ್ನಿಸಿದಾಗ ನಾನು ಅವರ ಜೊತೆ ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಗಲಾಟೆ ಮಾಡಿದ್ದರಿಂದ ಆರೋಪಿತರು ನನ್ನ ಹಾಗೂ ಚಾಸ 2 ರವರ ವಿರುದ್ಧ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಚಾಸ 2 ನನ್ನ ಅತ್ತೆಯ ಮಗನಾಗಬೇಕು. ನಮ್ಮ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ನಡೆಯುತ್ತಿದೆ. ನಮ್ಮ ವಿರುದ್ಧ ಆರೋಪಿತರು ದೂರು ನೀಡಿದ್ದರಿಂದ ಯಾವುದೇ ಘಟನೆ ನಡೆಯದಿದ್ದರೂ ಸಹ ಆರೋಪಿತರ ವಿರುದ್ಧ ಈ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಗೆ 90 ವರ್ಷ ವಯಸ್ಸಾಗಿರುತ್ತದೆ ಎಂದರೆ ಸರಿ. ನಾನು ಆರೋಪಿತರ ವಿರುದ್ಧ ದೂರು ನೀಡಿದ ನಂತರ 2 ನೇ ಆರೋಪಿಯು ತೀರಿಕೊಂಡಿರುತ್ತಾರೆ ಎಂದರೆ ಸರಿ. ಆರೋಪಿತರಿಗೆ ವಯಸ್ಸಾಗಿದ್ದರಿಂದ ಮುಂದೆ ಅವರನ್ನು ನೋಡಿಕೊಳ್ಳಬೇಕಾಗುತ್ತದೆ ಎಂದು ಅವರ ಜೊತೆ ಕಾರಣವಿಲ್ಲದೆ ಜಗಳ ತೆಗೆದು ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ಸರ್ಕಾರದಿಂದ ಮಂಜೂರಾಗಿರುವ ಸ್ವಯಾರ್ಜಿತ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯನ್ನು ಅವರು ಬೇರೆಯವರಿಗೆ ಕೊಡಬಹುದು ಎಂಬ ಭಯದಿಂದ ಅವರ ವಿರುದ್ಧ ಸುಳ್ಳು ದೂರನ್ನು ನೀಡಿ ಕಿರುಕುಳ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಹೇಳಿರುವ ಗಲಾಟೆಯು ಜಮೀನಿನ ಬಳಿ ಆಗಿರುತ್ತದೆ. ಗಲಾಟೆ ಯಾವ

ದಿನದಂದು ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ, ಆದರೆ ಬೆಳಿಗ್ಗೆ 10 ರಿಂದ 11 ಗಂಟೆಯ ಸಮಯದಲ್ಲಿ ಆಗಿರುತ್ತದೆ. ನಾನು ಖುದ್ದಾಗಿ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಯಾವುದೇ ಘಟನೆ ನಡೆಯದಿದ್ದರೂ ಸಹ ಆರೋಪಿತರಿಗೆ ಕಿರುಕುಳ ನೀಡಲು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಎಂಓ 1 ತರಹದ ದೊಣ್ಣೆ ಸಾಮಾನ್ಯವಾಗಿ ಎಲ್ಲ ಕಡೆ ಸಿಗುತ್ತದೆ ಎಂದರೆ ಸರಿ. ಎಂಓ 1 ದೊಣ್ಣೆಯನ್ನು ಪೋಲಿಸರಿಗೆ ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿತರು ನನಗೆ ನಮ್ಮ ಮನೆಯ ಹತ್ತಿರ ಬೈದಿರುತ್ತಾರೆ. 1 ನೇ ಆರೋಪಿಗೆ ಸಂಬಂಧಿಸಿದ ಆಸ್ತಿಯನ್ನು ಕಬಳಿಸಲು ಯಾವುದೇ ಘಟನೆ ನಡೆಯದಿದ್ದರೂ ಸಹ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಗಲಾಟೆ ನಡೆದಿದೆ ಎಂದು ಹೇಳುವ ಸಮಯದಲ್ಲಿ 5-6 ಜನ ಸೇರಿದ್ದರು. ಅವರ ಹೆಸರು ಗೌರಮ್ಮ, ನೇತ್ರಾವತಿ, ಮಹದೇವಪ್ಪ, ಸರ್ವಮಂಗಳ, ಶಿವಕುಮಾರ್ ಆಗಿರುತ್ತದೆ. ಅವರನ್ನು ಹೊರತುಪಡಿಸಿ ಬೇರೆ ಗ್ರಾಮಸ್ಥರು ಸಹ ಇದ್ದರು. ಯಾವುದೇ ಘಟನೆ ನಡೆಯದಿದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ